ಶ್ರೀ ಎಸ್. ಬಂಗಾರಪ್ಪ (ಶಿಕ್ಷಣ ಮಂತ್ರಿಗಳು).—

ಅ) ೧೭.

ಆ) ೯ ಶಾಲೆಗಳನ್ನು ೧೯೮೮-೮೯ ಹಾಗೂ ೮ ಶಾಲೆಗಳನ್ನು ೧೯೮೯-೯೦ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕುಶಾಲ.—(ಇ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಆದರೆ ಈ ಹಿಂದೆ ಜಿಲ್ಲಾ ಪರಿಷತ್ತಿನವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೮-೮೯ರಲ್ಲಿ ೯ ಮತ್ತು ೮೯-೯೦ರಲ್ಲಿ ೮ ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಿರುವುದಕ್ಕೆ ಈವರೆಗೆ ಸರ್ಕಾರದ ಅನುಮೋದನೆ ಆಗಿಲ್ಲ. ೧೯೮೮-೮೯ರಲ್ಲಿ ಮಂಜೂರಾತಿ ನೀಡಿದ ಶಾಲೆಗೆ ಸರ್ಕಾರ ಅನುಮೋದನೆ ನೀಡದಿದ್ದರಿ ೧೯೯೦-೧೯೯೧ರ ಮಾರ್ಚ್ ತಿಂಗಳಲ್ಲಿ ಎಸ್ ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರ ಕೂಡಲೇ ಮಂಜೂರಾತಿ ನೀಡುವುದೆ ಎಂದು ಕೇಳಬಯಸುತ್ತೇನೆ ?

ಶ್ರೀ ಕೆ.ಹೆಚ್. ರಂಗನಾಥ್.—ಸರ್ಕಾರ ಈ ದಿಸೆಯಲ್ಲಿ ಶೀಘ್ರ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಕುಶಾಲ.—ಅದೇ ರೀತಿ ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಪರಿಷತ್ತು ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಿದ್ದಕ್ಕೆ ಸರ್ಕಾರ ಅನುಮೋದನೆ ನೀಡುವುದೆ ಹಾಗೂ ಖಾಸಗಿ ಶಾಲೆಗಳಿಗೂ ಅನುಮೋದನೆ ನೀಡುವುದೆ ?

ಶ್ರೀ ಕೆ.ಹೆಚ್. ರಂಗನಾಥ್.—ಆ ಪ್ರಶ್ನೆ ಉದ್ಭವಿಸುವುದಿಲ್ಲ,

ಸರಕಾರಿ ಹಾಗೂ ನಗರ ಸಭೆಯ ಶಾಲೆಗಳು ಹಾಗೂ ಮಹಾವಿದ್ಯಾಲಯಗಳು

೫೭೩. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಸರಕಾರಿ ಶಾಲಾ ಕಾಲೇಜುಗಳಲ್ಲಿ ಪ್ರಯೋಗಾಲಯದ ಸಾಮಗ್ರಿ ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕನುಗುಣವಾಗಿಲ್ಲದಿರುವುದು ನಿಜವಲ್ಲವೆ ;

ಆ) ಹಾಗಿದ್ದಲ್ಲಿ ಇದನ್ನು ಸರಿತೂಗಿಸಲು ಸರ್ಕಾರದವರು ಕೈಗೊಂಡ ಅಥವಾ ಕೈಗೊಳ್ಳಲಿರುವ ಪರಿಣಾಮಕಾರಿ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಕಾಲೇಜು ಮತ್ತು ತಾಂತ್ರಿಕ ಇಲಾಖೆಗೆ ಸಂಬಂಧಿಸಿದಂತೆ ಪ್ರಯೋಗಾಲಯದ ಸಾಮಗ್ರಿಗಳು ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಸಮಾನಾಗಿರುತ್ತದೆ. ಆದರೆ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಯೋಗಾಲಯದ ಸಾಮಗ್ರಿಗಳು ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಅನುಕೂಲವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪ್ರಯೋಗಾಲಯದ ಶುಲ್ಕವನ್ನು ಸರ್ಕಾರಿ ಶಾಲಾ ಕಾಲೇಜುಗಳ ಮುಖ್ಯಸ್ಥರ ಖಾತೆಯಲ್ಲಿ ಇರಿಸಿ ಪ್ರಯೋಗಾಲಯದ ಸಾಮಗ್ರಿಗಳನ್ನು ಖರೀದಿಸಲು ಬಳಸಿಕೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಶಿಕ್ಷಣ ಸಚಿವರು ಉತ್ತರಿಸಿರುವುದರಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪದವಿ ಕಾಲೇಜುಗಳಲ್ಲಿ ಎಲ್ಲಾ ಅನುಕೂಲತೆ ಇದೆ, ಆದರೆ ಪದವಿಪೂರ್ವ ಕಾಲೇಜುಗಳಲ್ಲಿ ಮತ್ತು ಪ್ರೌಢಶಾಲೆಗಳಲ್ಲ ಪ್ರಯೋಗಾಲಯಕ್ಕೆ ಸಂಬಂಧಪಟ್ಟ ಹಾಗೆ ಅನುಕೂಲ ಇಲ್ಲವೆಂದು ಹೇಳಿದ್ದಾರೆ. ಅದನ್ನು ಯಾವಾಗ ಸರಿಪಡಿಸುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಅದಕ್ಕೆ ಒಂದು ವ್ಯವಸ್ಥಿತವಾದ ಯೋಜನೆಯನ್ನು ಹಾಕಬೇಕಿನಿಸುತ್ತದೆ. ಏತಕ್ಕೆಂದರೆ ನಾವು ಶಾಲೆಗಳನ್ನು ತೆರೆಯುವುದಕ್ಕೆ ಮೊದಲು ಕಟ್ಟಡ,

ಪೀಠೋಪಕರಣ, ಲೈಬ್ರರಿ, ಪ್ರಯೋಗಶಾಲೆಯ ಅನುಕೂಲ ಮುಂತಾದವನ್ನು ವ್ಯವಸ್ಥೆ ಮಾಡುವುದಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುತ್ತಿಲ್ಲ. ಇವತ್ತಿನ ದಿವಸ ಈ ಒಂದು ಪರಿಸ್ಥಿತಿ ಬಂದಿರುವುದರಿಂದ ಈ ಬಗ್ಗೆ ಎಲ್ಲ ಕಡೆಗಳಿಂದ ಅಂಕಿ ಅಂಶಗಳನ್ನು ತರಿಸುತ್ತಿದ್ದೇವೆ ಅದು ಬಂದ ಮೇಲೆ ಒಂದು ಯೋಜನೆ ತಯಾರು ಮಾಡಿ ಆ ಎಲ್ಲ ವ್ಯವಸ್ಥೆ ಕಲ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ರಾಮಲಿಂಗರೆಡ್ಡಿ.—ಮುಂದಿನ ಸಾಲಿನಲ್ಲಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಕೆ ಹೆಚ್. ರಂಗನಾಥ್.—ಇದಕ್ಕೆ ಬಹಳ ಹಣ ಬೇಕಾಗಿರುವುದರಿಂದ ಒಂದೇ ವರ್ಷದಲ್ಲಿ ಎಲ್ಲವನ್ನೂ ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳ ಬೇಕಾಗುತ್ತದೆ. ಹಂತ ಹಂತವಾಗಿ ಈ ಬೇಡಿಕೆಯನ್ನು ಪೂರೈಸಬೇಕಾಗುತ್ತದೆ.

ಪ್ರಶ್ನೆ ೮೪

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನನಗೆ ಬರುವುದಿಲ್ಲ. ಲೋಕೋಪಯೋಗಿ ಸಚಿವರಿಗೆ ಸಂಬಂಧಪಟ್ಟದ್ದು ಎಂದು ನಾನು ಅವರಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎ. ಕೃಷ್ಣಪ್ಪ.—ಅದು ಬಿಡಿಎಗೆ ಬರುತ್ತದೆ. ಲಕ್ಷ್ಮಣರಾವ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿ ಮಾಡುವ ಕಾಲದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೆರೆಗಳನ್ನು ಮುಚ್ಚಿ ನಿವೇಶನಗಳನ್ನು ಮಾಡುತ್ತಿದ್ದಾರೆ. ಅದು ನಗರಾಭಿವೃದ್ಧಿ ಸಚಿವರಿಗೆ ಬರುತ್ತದೆಯೇ ಹೊರತು ಲೋಕೋಪಯೋಗಿ ಸಚಿವರಿಗೆ ಬರುವುದಿಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇದು ಕೆರೆಗಳನ್ನು ಮುಚ್ಚಿ ಉದ್ಯಾನವನಗಳನ್ನಾಗಿ ಪರಿವರ್ತನೆ ಮಾಡುವ ವಿಚಾರವಾದ್ದರಿಂದ ಆ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಯವರು ವಾಪಸು ಕಳುಹಿಸಿಕೊಡಲಿ, ನಾನು ಮುಂದಿನವಾರ ಉತ್ತರಿಸುತ್ತೇನೆ.

ಶ್ರೀ ಎ ಕೃಷ್ಣಪ್ಪ.—ಲಕ್ಷ್ಮಣರಾವ್ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಿದೆಯೇ. ಹಾಗಿದ್ದಲ್ಲಿ ಈಗಿರುವ ಕೆರೆಗಳನ್ನು ಉದ್ಯಾನವನಗಳನ್ನಾಗಿ ಪರಿವರ್ತಿಸುವ ಸಲಹೆಯನ್ನು ಸರ್ಕಾರ ರಾಜ್ಯದ ಎಲ್ಲ ಕಡೆಯೂ ಪಾಲಿಸುತ್ತಿದೆಯೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಆದ್ದರಿಂದ ಇದು ನಗರಾಭಿವೃದ್ಧಿ ಸಚಿವರಿಗೆ ಬರುತ್ತದೆ.

ಅಧ್ಯಕ್ಷರು.—ಅದಕ್ಕೆ ಮಂತ್ರಿಗಳು ಮುಂದಿನವಾರ ಉತ್ತರಿಸುತ್ತಾರೆ. ಮುಂದಿನವಾರ ತೆಗೆದುಕೊಳ್ಳೋಣ ಈಗ ಮುಂದಿನ ಪ್ರಶ್ನೆ.

ಕೊಳಚೆ ನಿವಾಸಿಗಳ ಆರ್ಥಿಕ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಬಗ್ಗೆ

೩೫೩. ಶ್ರೀ ಪೆರಿಕಲ್ ಎಂ ಮಲ್ಲಪ್ಪ (ಚಿಕ್ಕಪೇಟೆ),—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

(ಅ) ಕರ್ನಾಟಕ ರಾಜ್ಯದಲ್ಲಿ ಗುರುತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ;

(ಆ) ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರ ಜನಸಂಖ್ಯೆ;

(ಇ) ಕೊಳಚೆ ನಿವಾಸಿಗಳ ''ಅಭಿವೃದ್ಧಿ ಆರ್ಥಿಕ ನಿಗಮ''ವನ್ನು ಸ್ಥಾಪಿಸುವ ಸೂಚನೆ ಸರ್ಕಾರದ ಮುಂದಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ೧,೨೭೦.

(ಆ) ಸುಮಾರು ೧೦.೫೦ ಲಕ್ಷ

(ಇ) ಇರುವುದಿಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ೧೨೭೦ ಕೊಳಚೆ ಪ್ರದೇಶಗಳಿವೆ ಎಂದು ಏನು ಹೇಳಿದ್ದಾರೆ ಇದರ ಅಂಕಿ ಅಂಶ ಸರಿಯಿದೆಯೇ. ಈ ಅಂಕಿ ಸಂಖ್ಯೆಯಲ್ಲಿ ಕರ್ನಾಟಕದ ಎಲ್ಲಾ ಸ್ಲಮ್ಸ್‌ಗಳನ್ನು ತೋರಿಸಿದ್ದೀರಾ. ಎರಡನೆಯದಾಗಿ ಈ ಕೊಳಚೆ ಪ್ರದೇಶದ